## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 1) ಶ್ರೀಮತಿ ಅಕ್ತರಬೇಗಂ ಮಸೂತಿ, 2) ಶ್ರೀಮತಿ ಶೋಭಾ ಹಂಪಣ್ಣನವರ್ ಮತ್ತು 3) ಶ್ರೀಮತಿ ಜೈತುನ್ನೀಸ ಮಖ್ಬೂಲಸಾಬ ಶೇತಸನದಿ, ಸದಸ್ಯರುಗಳು ಕುಸನೂರು ಗ್ರಾಮ ಪಂಚಾಯಿತಿ, ಹಾನಗಲ್ಲ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(vi) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಪತ್ರ ಸಂಖ್ಯೆ:ಗ್ರಾಅಪ 1135 ಗ್ರಾಪಂಅ 208, ದಿನಾಂಕ:02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ ಇವರ ಪತ್ರ ಸಂಖ್ಯೆ: ಹಾಜಿಪಂ/ಆಡಳಿತ-2/ಗ್ರಾಪಂ/ಇತರೆ/ವಹಿ/2027/2019-20, ದಿನಾಂಕ:18.12.2019.
3. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರ ಪತ್ರ ಸಂಖ್ಯೆ: ಪ್ರಾಆಬೆ : ಜಿಪಂ : 43(ಎ) :ಸಿಆರ್-23:2019-20, ದಿನಾಂಕ:18.03.2020.
4. ಸರ್ಕಾರದ ವಿಚಾರಣಾ ನೋಟೀಸು ಸಂಖ್ಯೆ: ಗ್ರಾಅಪ 484 ಗ್ರಾಪಂಅ 2020, ದಿನಾಂಕ:13.01.2021.

***

1) ಶ್ರೀಮತಿ ಅಕ್ತರಬೇಗಂ ಮಸೂತಿ, 2)ಶ್ರೀಮತಿ ಶೋಭಾ ಹಂಪಣ್ಣನವರ್ ಮತ್ತು 3) ಶ್ರೀಮತಿ ಜೈತುನ್ನೀಸ ಮಖ್ಬೂಲಸಾಬ ಶೇತಸನದಿ, ಸದಸ್ಯರುಗಳು ಕುಸನೂರು ಗ್ರಾಮ ಪಂಚಾಯಿತಿ, ಹಾನಗಲ್ಲ ತಾಲ್ಲೂಕು, ಹಾವೇರಿ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ತಮ್ಮ ಅಧಿಕಾರಾವಧಿಯಲ್ಲಿ ಈ ಕೆಳಕಂಡ ಆರೋಪಗಳನ್ನು ಎಸಗಿರುವುದಾಗಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಹಾವೇರಿ ಜಿಲ್ಲೆ ರವರು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ 43(ಎ), 48(4) ಮತ್ತು 48(5) ರಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರುಗಳು ಹಾಗೂ ಸದಸ್ಯರುಗಳ ಮೇಲಿನ ಆರೋಪಗಳಿಗೆ ವಿಚಾರಣೆ ನಡೆಸಲು ಮೇಲೆ ಕ್ರಮಾಂಕ (1) ರಲ್ಲಿ ಪ್ರಾದೇಶಿಕ ಆಯುಕ್ತರುಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದ್ದು, ಅದರನ್ವಯ ಸದರಿ ಪ್ರಕರಣದ ವಿಚಾರಣೆ ನಡೆಸಿ, ಸರ್ಕಾರಕ್ಕೆ ಸಲ್ಲಿಸುವಂತೆ ಮೇಲೆ ಓದಲಾದ ಕ್ರಮಾಂಕ (2) ರ ಪತ್ರದಲ್ಲಿ ಈ ಪ್ರಕರಣವನ್ನು ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರಿಗೆ ವಹಿಸಲಾಗಿತ್ತು.

**ದೋಷಾರೋಪಣೆ:-**

" ಹಾವೇರಿ ಜಿಲ್ಲೆಯ ಹಾನಗಲ್ಲ ತಾಲ್ಲೂಕಿನ ಕೂಸನೂರ ಗ್ರಾಮ ಪಂಚಾಯಿತಿಯ ಸದಸ್ಯರಾದ 1) ಶ್ರೀಮತಿ ಅಕ್ತರಬೇಗಂ ಮಸೂತಿ, ಇವರು ತಮ್ಮ ಮಗನ ಹೆಸರಿನಲ್ಲಿ, 2) ಶ್ರೀಮತಿ ಶೋಭಾ ಹಂಪಣ್ಣನವರ, ಇವರು ತಮ್ಮ ಮಾವನ ಮಗನ ಹೆಸರಿನಲ್ಲಿ, 3) ಶ್ರೀಮತಿ ಜೈತುನ್ನಿಸಾ ಮುಖ್ಬೂಲಸಾಬ ಶೇತಸನದಿ ಇವರು ತಮ್ಮ ಮಗನ ಹೆಸರಿನಲ್ಲಿ ಕೂಸನೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯ 14ನೇ ಹಣಕಾಸು ಅನುದಾನದಿಂದ ಅವರವರ ಕುಟುಂಬದ ಹತ್ತಿರದ ಸಂಬಂಧಿಕರಿಗೆ ಚೆಕ್ ವಿತರಿಸಿ ಅಧಿಕಾರ ದುರುಪಯೋಗವಾಗಿರುವುದು ಕಂಡು ಬಂದಿರುತ್ತದೆ."

ಉಲ್ಲೇಖ (1) ರಂತೆ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರು ಈ ಪ್ರಕರಣದ ವಿಚಾರಣೆ ನಡೆಸಿ, ಪ್ರಕರಣದ ವಿಚಾರಣೆ ಕಾಲಕ್ಕೆ ಶ್ರೀ ನವೀನ ಹಂಪಣ್ಣವರ ಇವರು 2ನೇ ಪ್ರತಿವಾದಿಯಾದ ಶ್ರೀಮತಿ ಶೋಭಾ ಹಂಪಣ್ಣನವರ, ಇವರ ದೂರದ ಸಂಬಂಧಿಯಾಗಿದ್ದು, ಸದರಿಯವರು ಸದಸ್ಯರ ಮೇಲೆ ಅವಲಂಬಿತರಾಗಿರುವುದಿಲ್ಲ. ಆದುದರಿಂದ ಪ್ರತಿವಾದಿಯಾದ ಶ್ರೀಮತಿ ಶೋಭಾ ಹಂಪಣ್ಣನವರ ರವರ ಮೇಲೆ ಮಾಡಲಾದ ಆರೋಪವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಉಪಪ್ರಕರಣ (1)(5)(ಸಿ) ರನ್ವಯ ಪರಿಗಣಿಸಲು ಸಾಧ್ಯವಾಗುವುದಿಲ್ಲ.

ಮುಂದುವರಿದು ಪ್ರತಿವಾದಿ-1 ಆದ ಶ್ರೀಮತಿ ಅಕ್ತರಬೇಗಂ ಮಸೂತಿ ಮತ್ತು ಪ್ರತಿವಾದಿ-3 ಆದ ಶ್ರೀಮತಿ ಜೈತುನ್ನಿಸಾ ಮುಖ್ಬೂಲಸಾಬ ಶೇತಸನದಿ ಇವರ ಮೇಲಿನ ಆರೋಪದಂತೆ ಸದರಿಯವರು ಅವರವರ ಮಗನ ಹೆಸರಿನಲ್ಲಿ ಚೆಕ್ ವಿತರಿಸಿರುವ ಬಗ್ಗೆ ಪರಿಶೀಲಿಸಿದ್ದು, ಸದರಿಯವರ ಮಕ್ಕಳಿಗೆ ಕೆಲಸಗಾರರು ಎಂದು ಇಲಾಖೆಯ ಕೆಲಸಗಳನ್ನು ವಹಿಸಲಾಗಿದ್ದು, ಕಾಂಟ್ರ್ಯಾಕ್ಟ್ ಕೆಲಸಗಳಾಗಿರುವುದಿಲ್ಲ. ಅಂದರೆ ಗ್ರಾಮ ಪಂಚಾಯಿತಿ ವತಿಯಿಂದ ಎನ್.ಎಂ.ಆರ್ ಅಡಿಯಲ್ಲಿ ನೀಡಲಾದ ಕೆಲಸಗಳಾಗಿದ್ದು, ಕಾಂಟ್ರ್ಯಾಕ್ಟ್ ನಡಿ ನೀಡಿದ ಕೆಲಸಗಳಾಗಿರುವುದಿಲ್ಲ. ಆದ್ದರಿಂದ ಪ್ರತಿವಾದಿ-1 ಮತ್ತು ಪ್ರತಿವಾದಿ-3 ರ ಮೇಲೆ ಮಾಡಲಾದ ಆರೋಪಗಳ ಬಗ್ಗೆ ಅನುಮಾನವನ್ನು ಮೀರಿ ಸಾಬೀತುಪಡಿಸಲಾಗುವುದಿಲ್ಲ.

ಸದರಿ ಕೆಲಸಗಳನ್ನು ಅವರವರ ಹತ್ತಿರದ ಸಂಬಂಧಿಗಳಿಗೆ ನೀಡುವಲ್ಲಿ ಪ್ರತಿವಾದಿ-1 ಮತ್ತು ಪ್ರತಿವಾದಿ-3 ಇವರು ಯಾವುದೇ ಪ್ರಭಾವ ಬೀರಿರುವುದಿಲ್ಲ. ಹಾಗೂ ನೇರವಾಗಿ ಭಾಗಿಯಾಗಿರುವುದಿಲ್ಲವೆಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್ ಕುಸನೂರ ರವರು ತಿಳಿಸಿರುತ್ತಾರೆ ಹಾಗೂ ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿ-1 ಮತ್ತು ಪ್ರತಿವಾದಿ-3 ರ ಹತ್ತಿರದ ಸಂಬಂಧಿಗಳು ಎನಿಸಿಕೊಂಡಿರುವವರು ಪ್ರತಿವಾದಿಗಳು ಗ್ರಾಮ ಪಂಚಾಯಿತಿ ಸದಸ್ಯರಾಗುವ ಮೂರ್ವದಿಂದಲೇ ಗ್ರಾಮ ಪಂಚಾಯಿತಿಯ ಇದೇ ರೀತಿಯ ಕೆಲಸಗಳನ್ನು ನಿರ್ವಹಿಸುತ್ತಿರುವ ಬಗ್ಗೆ ಕಂಡುಬಂದಿರುತ್ತದೆ. ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸದರಿ ಪ್ರಕರಣವನ್ನು ವಜಾಗೊಳಿಸಲಾಗಿದೆ ಎಂದು ಅಭಿಪ್ರಾಯಪಟ್ಟು ಪ್ರಾದೇಶಿಕ ಆಯುಕ್ತರು, ಬೆಳಗಾವಿ ರವರು ದಿನಾಂಕ: 18.03.2020 ರಂದು ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ಸದರಿ ಕಡತವನ್ನು ಪರಿಶೀಲಿಸಲಾಗಿ, ಶ್ರೀಮತಿ ಅಕ್ತರಬೇಗಂ ಮಸೂತಿ ರವರು ತಮ್ಮ ಮಗ ಶ್ರೀ ಮುಕ್ತರ್ ಮಹಮದ್ ಮಸೂತಿ ಇವರ ಹೆಸರಿನಲ್ಲಿ ರೂ.2,41,913/- ಗಳನ್ನು, ಶ್ರೀಮತಿ ಶೋಭಾ ಹಂಪಣ್ಣನವರ್ ರವರ ತಮ್ಮ ಮಾವನ ಮಗ ಶ್ರೀ ನವೀನ್ ಹಂಪಣ್ಣನವರ್ ರವರ ಹೆಸರಿನಲ್ಲಿ ರೂ.1,38,966/- ಗಳನ್ನು ಹಾಗೂ ಶ್ರೀಮತಿ ಶ್ರೀಮತಿ ಜೈತುನ್ನೀಸ ಮಖ್ಬೂಲಸಾಬ ಶೇತಸನದಿ ರವರ ಮಗ ಶ್ರೀ ರಬ್ಬಾನಿ ಶೇತ ಸನದಿ ರವರ ಹೆಸರಿನಲ್ಲಿ ರೂ.64,015/- ಗಳ್ನು ಚೆಕ್ ಮೂಲಕ ಗ್ರಾಮ ಪಂಚಾಯಿತಿಯಿಂದ ವಿವಿಧ ಕಾಮಗಾರಿಗಳ ಅನುಷ್ಠಾನದ ಬಾಬಿಗಾಗಿ ಪಡೆದುಕೊಂಡಿರುವ ದಾಖಲೆಗಳಿದ್ದು, ಪ್ರಾದೇಶಿಕ ಆಯುಕ್ತರು ಸಹ ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದು, ಸದಸ್ಯರುಗಳ ಮಕ್ಕಳ ಹೆಸರಿನಲ್ಲಿ ಕಾಂಟ್ರೇಕ್ಟ್ ನೀಡಿರುವುದಿಲ್ಲ ಬದಲಾಗಿ ಕೆಲಸಗಾರರು ಎಂದು ಎನ್.ಎಂ.ಆರ್ ಅಡಿಯಲ್ಲಿ ನೀಡಿರುವ ಹಣವಾಗಿರುತ್ತದೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಹಾಗಾಗಿ ಇದರಲ್ಲಿ ಹೆಚ್ಚಿನ ಅನುದಾನ 14ನೇ ಹಣಕಾಸಿನ ಅನುದಾನವಾಗಿರುತ್ತದೆ. ಇಷ್ಟೊಂದು ಪ್ರಮಾಣದ ಹಣವನ್ನು ಎನ್.ಎಂ.ಆರ್ ಮೂಲಕ ಕೂಲಿ ಬಾಬ್ತು ನೀಡುವುದು ಕ್ರಮಬದ್ಧವಾಗಿರುವುದಿಲ್ಲ. ಆದುದರಿಂದ ದೂರಿನ ಬಗ್ಗೆ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಮತ್ತೊಮ್ಮೆ ಪರಿಶೀಲಿಸಿ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ, ಎದುರುದಾರರಾದ ಸದಸ್ಯರುಗಳಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಲು ನಿರ್ಣಯಿಸಿ, ಮೇಲೆ ಓದಲಾದ ಕ್ರಮಾಂಕ(4) ರಲ್ಲಿ ವಿಚಾರಣಾ ನೋಟಿಸ್ಸನ್ನು ಜಾರಿ ಮಾಡಿ ಪ್ರಕರಣವನ್ನು ದಿನಾಂಕ:21.01.2021 ರಂದು ಪ್ರಧಾನ ಕಾರ್ಯದರ್ಶಿಯವರ ಅರೆನ್ಯಾಯಿಕ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲಾಗಿದೆ.

ಎದುರುದಾರರಾದ 1) ಶ್ರೀಮತಿ ಅಕ್ತರಬೇಗಂ ಮಸೂತಿ 2) ಶ್ರೀಮತಿ ಶೋಭಾ ಹಂಪಣ್ಣನವರ್ ಮತ್ತು 3) ಶ್ರೀಮತಿ ಜೈತುನ್ನೀಸ ಮಖ್ಬೂಲಸಾಬ ಶೇತಸನದಿ, ಸದಸ್ಯರುಗಳು ಕುಸನೂರು ಗ್ರಾಮ ಪಂಚಾಯಿತಿ, ಹಾನಗಲ್ಲ ತಾಲ್ಲೂಕು, ಹಾವೇರಿ ಜಿಲ್ಲೆ, ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಪರವಾಗಿ ಅಧಿಕಾರಿಗಳು ಸದರಿ ವಿಚಾರಣೆಗೆ ಹಾಜರಿದ್ದು, ಸದರಿಯವರ ಅಹವಾಲನ್ನು ಹೇಳಲು ಅವಕಾಶವನ್ನು ನೀಡಿ, ಸದರಿಯವರ ಅಹವಾಲನ್ನು ಆಲಿಸಲಾಗಿ, ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರ ವರದಿ, ಲಭ್ಯ ದಾಖಲೆಗಳು ಹಾಗೂ ಎದುರುದಾರರ ಹೇಳಿಕೆಯೊಂದಿಗೆ ಪರಿಶೀಲಿಸಲಾಗಿ, ಪ್ರಾದೇಶಿಕ ಆಯುಕ್ತರ ವರದಿಯನ್ನು ಒಪ್ಪಲು ಸಾಧ್ಯವಿಲ್ಲ ಎಂದು ನಿರ್ಣಯಿಸಲಾಯಿತು.

..3

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ), 48(4) ಮತ್ತು 48(5) ರಡಿ ಸದರಿ ಪ್ರಕರಣವನ್ನು ಪರಿಶೀಲಿಸಿದಾಗ, 1) ಶ್ರೀಮತಿ ಅಕ್ತರ ಬೇಗಂ ಮಸೂತಿ, ಇವರು ತಮ್ಮ ಮಗನ ಹೆಸರಿನಲ್ಲಿ ರೂ.2,41,913/- ಗಳನ್ನು, 2) ಶ್ರೀಮತಿ ಶೋಭಾ ಹಂಪಣ್ಣನವರ, ಇವರು ತಮ್ಮ ಮಾವನ ಮಗನ ಹೆಸರಿನಲ್ಲಿ ರೂ.1,38,966/- ಗಳನ್ನು ಮತ್ತು 3) ಶ್ರೀಮತಿ ಜೈತುನ್ನಿಸಾ ಮಖ್ಬೂಲಸಾಬ ಶೇತಸನದಿ ಇವರು ತಮ್ಮ ಮಗನ ಹೆಸರಿನಲ್ಲಿ ರೂ.64,015/- ಗಳನ್ನು ಕೂಸನೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯ 14ನೇ ಹಣಕಾಸು ಅನುದಾನದಿಂದ ಅವರವರ ಕುಟುಂಬದ ಹತ್ತಿರದ ಸಂಬಂಧಿಕರಿಗೆ ಚೆಕ್ ವಿತರಿಸಿ ಅಧಿಕಾರ ಅವಧಿಯಲ್ಲಿ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಸಾಬೀತಾಗಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(vi) ರಡಿ ಹಾವೇರಿ ಜಿಲ್ಲೆ, ಹಾನಗಲ್ಲ ತಾಲ್ಲೂಕು, ಕುಸನೂರು ಗ್ರಾಮ ಪಂಚಾಯಿತಿಯ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಲು ನಿರ್ಧರಿಸಿ,

ಅದರಂತೆ ಈ ಕೆಳಕಂಡ ಆದೇಶ

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 484 ಗ್ರಾಪಂಅ 2020, ಬೆಂಗಳೂರು, ದಿನಾಂಕ: 15.03.2021.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 1) ಶ್ರೀಮತಿ ಅಕ್ತರಬೇಗಂ ಮಸೂತಿ, 2) ಶ್ರೀಮತಿ ಶೋಭಾ ಹಂಪಣ್ಣನವರ್ ಮತ್ತು 3) ಶ್ರೀಮತಿ ಜೈತುನ್ನೀಸ ಮಖ್ಬೂಲಸಾಬ ಶೇತಸನದಿ, ಹಿಂದಿನ ಸದಸ್ಯರುಗಳು ಕುಸನೂರು ಗ್ರಾಮ ಪಂಚಾಯಿತಿ, ಹಾನಗಲ್ಲ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧದ ಅಧಿಕಾರ ದುರುಪಯೋಗಪಡಿಸಿಕೊಂಡಿರುವ ಆರೋಪವು ಸಾಬೀತಾಗಿದ್ದು, ಸದರಿಯವರು ಪ್ರಸ್ತುತ ಗ್ರಾಮ ಪಂಚಾಯಿತಿಯ ಸದಸ್ಯರಲ್ಲದ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)(vi) ರಡಿ ಇವರನ್ನು ಸದರಿ ಅಧಿನಿಯಮದ 12(ಎಲ್) ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 15/03/21
(ನವೀನ್‌ಕುಮಾರ್ ಬಿ.)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. (ಜಿ.ಪಂ)

15/03/21

<u>ಗೆ:</u>

1. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ.
2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ ರಸ್ತೆ, ಬೆಂಗಳೂರು.-09
3. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾವೇರಿ ಜಿಲ್ಲೆ.
4. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ಹಾನಗಲ್ಲ ತಾಲ್ಲೂಕು, ಹಾವೇರಿ ಜಿಲ್ಲೆ.
5. 1) ಶ್ರೀಮತಿ ಅಕ್ತರಬೇಗಂ ಮಸೂತಿ, 2) ಶ್ರೀಮತಿ ಶೋಭಾ ಹಂಪಣ್ಣನವರ್ ಮತ್ತು 3) ಶ್ರೀಮತಿ ಜೈತುನ್ನೀಸ ಮಖ್ಬೂಲಸಾಬ ಶೇತಸನದಿ, ಹಿಂದಿನ ಸದಸ್ಯರುಗಳು ಕುಸನೂರು ಗ್ರಾಮ ಪಂಚಾಯಿತಿ, ಹಾನಗಲ್ಲ ತಾಲ್ಲೂಕು, ಹಾವೇರಿ ಜಿಲ್ಲೆ.
6. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು(ಪಂ.ರಾಜ್-1), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.